4069/10

8412

8412

# ಭಕ್ತಮನೋರಂಜನಿ.

ವಿ - ಶೇಷಗಿರಿರಾವ್.

O,
33.1x DES B
N23
1754

ಸರಸ್ವತೀ ಭಂಡಾರ
ಪರಿಷತ್ತು
ಯಕ್ಷಗಾನ..........
ಕ್ರ. ಸಂ. ..........

8412

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮
ಕ್ರ. ಸಂಖ್ಯೆ 8412 ಪು. ಸಂಖ್ಯೆ.........
ದಿನಾಂಕ ..............................

Digitized by ROJA MUTHIAH RESEARCH LIBRARY

8412

1754

8412

ಶ್ರೀ.

# ಭಕ್ತಮನೋರಂಜನಿ.

ಗ್ರಂಥಕರ್ತ

ದೇಶಾಯಿ ಶೇಷಗಿರಿರಾವು

ನಂದಿ.

ಪ್ರಥಮ ಮುದ್ರಣ 1000

ಚಿಕ್ಕಬಳ್ಳಾಪುರ.

"ಎಗ್ಜಾಮಿನರ್" ಮುದ್ರಾಕ್ಷರಶಾಲೆ.

1923

ಕಾಪಿರೈಟ್ ರಿಜಸ್ಟರ್ಡ್

Price 0-2-6] [ಬೆಲೆ ೦-೨-೬

Digitized by ROJA MUTHIAH R...

ಮ|| ರಾ|| ಬಿ. ವೆಂಕಟರಾಮಯ್ಯ [illegible]ರ
[illegible] —.

[illegible]

[illegible]

[illegible]

[illegible] —.

ನಂಬಿ— ಇಂತು ತಮ್ಮ ವಿಧೇಯ
12. 8. 24. ದೇಶಾಯಿ ಶೇಷಗಿರಿರಾಯ

O 33,1x DES B
N23

8412

# ಪೀಠಿಕೆ.

—: 0 :—

"ಭಕ್ತಮನೋರಂಜನಿ" ಎಂಬೀ ಗ್ರಂಥವು ಹೆಸರಿಗೆತಕ್ಕಂತೆ ಭಕ್ತರ ಮನಸ್ಸನ್ನು ಸಂತೋಷಪಡಿಸತಕ್ಕದಾಗಿದೆಯೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆನು. ಗ್ರಂಥಕರ್ತರ ಹೃದಯದಲ್ಲಿ ನೆಲೆಗೊಂಡಿರುವ ಭಗವದ್ಭಕ್ತಿಯ ಬಲುಮೆಯು ಕವಿತಾಕರಣದಲ್ಲಿವರನ್ನು ಪ್ರೇರಿಸಿರುವುದರಿಂದ ವಾಚಕರು ಇದರಲ್ಲಿ ದೋಷಗಳನ್ನು ಎಂದಿಗೂ ಒಗೆಯಲಾರರು. ನಿರ್ದೋಷವೂ ನಿರ್ಗುಣವೂ ಆದವಸ್ತುವು ಪ್ರಪಂಚದಲ್ಲಿ ಯಾವದು ತಾನೆ ಇರುವುದು? ಭಕ್ತಿರಸವು ಪ್ರವಾಹರೂಪವಾಗಿ ಹರಿದು ಭಕ್ತಮಾನಸಸರಸ್ಸನ್ನು ತುಂಬಿ ತುಳುಕುವಂತೆ ಮಾಡುತ್ತಿರುವ 'ಭಕ್ತಕರ್ಣಾಮೃತ,ವೆಂಬ ಹೆಸರಿನ ಉದ್ಗ್ರಂಥವು ಬ್ರಹ್ಮಶ್ರೀಆದಿಪೂಡಿಸೋಮನಾಥರಾಯರವರಿಂದ ರಚಿಸಲ್ಪಟ್ಟಿರುವುದು ಆ ಬಾಲಗೋಪಾಲವಿದಿತವಾಗಿರುವುದಲ್ಲವೆ? ಅದರಲ್ಲಿನ ಕೆಲವು ಕೀರ್ತನೆಗಳು ಶ್ರೀಯುತ ದೇಶಾಯಿ-ಶೇಷಗಿರಿರಾಯರವರಿಂದ ಕನ್ನಡಕ್ಕೆ ಹೀಗೆ ಸುಲಭಶೈಲಿಯಿಂದ ಪರಿವರ್ತಿಸಲ್ಪಟ್ಟು, ಸಮಸ್ತ ಭಕ್ತರ ಅಂಗೀಕಾರಕ್ಕೆ ಪಾತ್ರವಾಗಿದೆ. ಇದು ಹೃದಯಂಗಮವಾಗಿರುವುದರಿಂದ ಸರ್ವರೂ ಇದನ್ನು ಗಾನಮಾಡಿ ಸಂತುಷ್ಟರಾಗಬೇಕೆಂದು ಹಾರೈಸುತ್ತೇನೆ.

ತಾ|| ೨೦-೧೧-೨೩ ಘ. ಕೇಶವಯ್ಯಾ.

Digitized by ROJA MUTHIAH RESEARCH LIBRARY

# ವಿಜ್ಞಾಪನೆ

ಸಂಸ್ಕೃತಾಂಧ್ರಹಿಂದಿ ಕರ್ಣಾಟಾಂಗ್ಲೇಯ ಭಾಷಾವಿಶಾರದರೂ, ಸತ್ಯಾರ್ಥಪ್ರಕಾಶ, "ರಘುವಂಶ, ಗೀತಾಂಜಲಿ, ಕಿನ್ನರೀವಿಜಯ, ವಿಜಯೇಂದ್ರವಿಜಯಾದಿ ಬಹು ಗ್ರಂಥಕರ್ತರೂ, ಭಕ್ತವರ್ಯರೂ ಆದ ಬ್ರಹ್ಮಶ್ರೀ ಆದಿಪೂಡಿ ಸೋಮನಾಥರಾಯರವರಿಂದ ರಚಿಸಲ್ಪಟ್ಟ ಭಕ್ತಕರ್ಣಾಮೃತವೆಂಬ ಆಂಧ್ರಗ್ರಂಥವನ್ನನುಸರಿಸಿ ನನ್ನ ಅಲ್ಪಬುದ್ಧಿಗೆ ತೋರಿದಂತೆ ಕೆಲವು ಕೀರ್ತನೆಗಳನ್ನು ಪರಮೇಶ್ವರನ ಕೃಪೆಯಿಂದ "ಭಕ್ತಮನೋರಂಜನಿ" ಎಂದು ಹೆಸರಿಸಿ ಕನ್ನಡಿಸಿರುವೆನು. ಇದನ್ನು ಪರಿವರ್ತಿಸಲು ಅನುಜ್ಞಾಪತ್ರವನ್ನು ಅನುಗ್ರಹಿಸಿದ ಬ್ರ॥ಶ್ರೀ॥ ಆ. ಸೋಮನಾಥರಾಯರವರಿಗೂ, ಇದನ್ನು ಪ್ರೀತಿಪೂರ್ವಕವಾಗಿ ಪರಿಷ್ಕರಿಸಿ, ಪೀಠಿಕೆಯನ್ನು ಬರೆದು, ಅಚ್ಚುತಪ್ಪುಗಳನ್ನು ತಿದ್ದಿ ಮಹದುಪಕಾರವನ್ನು ಮಾಡಿದ ಸಂಸ್ಕೃತಕರ್ಣಾಟಾಂಧ್ರಭಾಷಾಕೋವಿದರೂ, ವಿವೇಕವಿಜಯ, ಭೀಮಸೇನವಿಜಯ, ಪಾಂಡವವಿಜಯ, ಭರ್ತೃಹರಿನಿರ್ವೇದವೇ ಮೊದಲಾದ ಬಹು ಗ್ರಂಥಕರ್ತರೂ, ನನ್ನ ಮಿತ್ರವರ್ಯರೂ ಆದ ಶ್ರೀವಾರ್ಕ ಪಂಡಿತಕವಿ, ಎ. ಕೇಶವಯ್ಯನವರಿಗೂ, ಇದನ್ನು ಬರೆಯುವುದರಲ್ಲಿ ನನಗೆ ಉಂಟಾದ ಕೆಲವು ಸಂದೇಹಗಳನ್ನು ನಿವಾರಿಸಿಸಹಾಯಮಾಡಿದ ನನ್ನ ಮಿತ್ರವರ್ಯರಾದ ಬ್ರ॥ಶ್ರೀ॥ ಎಂ. ಸೂರ್ಯನಾರಾಯಣಶಾಸ್ತ್ರಿಗಳವರಿಗೂ ಶ್ರೀಯುತ ಸಿ. ಶ್ರೀನಿವಾಸರಾಯರವರಿಗೂ ಈ ಗ್ರಂಥದ ಶುದ್ಧಪ್ರತಿಗಳನ್ನು ಬರೆದು ನನಗೆ ಸಹಾಯಮಾಡಿದ ನನ್ನ ಮಿತ್ರವರ್ಯರಾದ ಶ್ರೀಯುತ ಎಸ್. ವೆಂಕಟರಾಮಯ್ಯನವರಿಗೂ. ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಹೃದಯಪೂರ್ವಕವಾಗಿ ಸಮರ್ಪಿಸುತ್ತಿರುವೆನು.

ಈ ಗ್ರಂಥವನ್ನು ಮುದ್ರಿಸಿ ಪ್ರಕಟಗೊಳಿಸಲು ಯಥೋಚಿತ ದ್ರವ್ಯ

8412

ಸಹಾಯವನ್ನು ಮಾಡಿದ ಸತ್ಕಾರ್ಯಪ್ರೋತ್ಸಾಹಕರಾದ ಈ ಕೆಳಗೆ ಕಂಡ ಮಿತ್ರವರ್ಯರಿಗೆ ಕೃತಜ್ಞನಾಗಿರುವೆನಲ್ಲದೆ ಇವರುಗಳ ಉಪಕಾರವು ಚಿರಸ್ಮರಣೀಯವಾಗಿರುವುದು.

"ಶ್ರೀಯುತ ಹುರಳಗುರ್ಕಿ ಚಿಕ್ಕನರಸಿಂಹಯ್ಯನವರು. ಎಚ್. ಎ. ನಂಜುಂಡಪ್ಪನವರು. ಹುರಳಗುರ್ಕಿ ನರಸಪ್ಪನವರು. ವಲಿಕಾರಿ ವೆಂಕಟಪ್ಪನವರು. ಅಂಗಡಿ ನಂಜುಂಡಪ್ಪನವರು. ಬನ್ನಿಕುಪ್ಪೆ ವೆಂಕಟರಮಣಪ್ಪನವರು ಎಂ. ಆದ್ಯಮೂರ್ತಿಯವರು."

ಗುಣಗ್ರಹಣ ಪಾರೀಣರಾದ ವಾಚಕಮಹಾಶಯರು ಇದರಲ್ಲಿನ ದೋಷಗಳನ್ನು ಗಮನಿಸದೆ ಪರಮೇಶ್ವರನ ದಿವ್ಯಗುಣಗಳನ್ನು ಕೀರ್ತಿಸುವುದರಲ್ಲಿಯೇ ತಮ್ಮ ಮನಸ್ಸನ್ನು ನೆಲೆಗೊಳಿಸಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಬೇಡುತ್ತಿರುವೆನು.

ನಂದಿ — ಇಂತು ಸಜ್ಜನವಿಧೇಯ,

ಕೋಲಾರ್ ಡಿಸ್ಟ್ರಿಕ್ಟ್ }
ನವಂಬರ್-1923 } ದೇಶಾಯಿ ಶೇಷಗಿರಿರಾವು.

## ಓಂ.

ಪ್ರಭೋ! ಪ್ರೇಮಸಾಗರಾ!! ನೀನು ಅನಂತಪ್ರೇಮನಿಧಿಯಾಗಿರುವೆ. ನಿನಗೆ ಪ್ರಿಯತಮವಾದ ಮಾನವಸಂತಾನದ ಸೌಖ್ಯಕ್ಕಾಗಿ, ನೀನು ಮಾಡಿರುವ ಪ್ರಪಂಚದಲ್ಲಿನ ಪ್ರತಿವಸ್ತುವೂ ನಿನ್ನ ಪ್ರೇಮವನ್ನೆ ತೋರಿಸುತ್ತಿರುವುದು. ನೀನು ನಿನ್ನ ಪ್ರೇಮಾಮೃತವನ್ನು ನಮ್ಮ ಮೇಲೆ ಸುರಿಸಿ ನಮ್ಮ ಹೃದಯಗಳನ್ನು ನಿನ್ನ ಕಡೆಗೆ ಆಕರ್ಷಿಸಿಕೊಳ್ಳುತ್ತಲಿರುವೆ. ಶೈಶವದಿಂದಲೂ ಮಾನವಸಮಾಜವು ನಿನಗಾಗಿಯೇ ತಪಿಸುತ್ತಿರುವುದು; ನಿನ್ನ ಮಹಿಮೆಯನ್ನು ವರ್ಣಿಸುವುದಕ್ಕೇ ಪ್ರಯತ್ನಿಸುತ್ತಿರುವುದು. ನೀನು ಅನಂತಮಹಿಮಾನ್ವಿತನಾದುದರಿಂದಲೇ ಯುಗಯುಗಗಳಿಂದಲೂ ಅನೇಕಮಂದಿ ಭಕ್ತರು ಅನೇಕ ವಿಧಗಳಲ್ಲಿ ನಿನ್ನನ್ನು ವರ್ಣಿಸಿದರೂ ಇನ್ನೂ ಮಾನವಹೃದಯಕ್ಕೆ ತೃಪ್ತಿಯಿಲ್ಲವು. ಹೇಳಿದಂತೆಲ್ಲಾ ಇನ್ನೂ ಹೇಳಬೇಕೆಂದೂ ಕೇಳಿದಂತೆಲ್ಲಾ ಇನ್ನೂ ಕೇಳಬೇಕೆಂದೂ ಕೋರಿಕೆ ಹುಟ್ಟುತ್ತಿರುವುದು. ನಿನ್ನಾಜ್ಞೆಯನ್ನು ಶಿರಸಾವಹಿಸಿಯೇ, ನಿನ್ನ ಮಹಿಮೆಯನ್ನು ಕೊಂಡಾಡುವುದಕ್ಕೂ, ನಿನ್ನ ಧರ್ಮವನ್ನು ಪ್ರಚಾರಮಾಡುವುದಕ್ಕೂ, ನಿನ್ನ ದಿವ್ಯಗುಣಗಳನ್ನು ವರ್ಣಿಸುವುದಕ್ಕೂ, ನಿನ್ನ ಪವಿತ್ರನಾಮವನ್ನು ಕೀರ್ತಿಸುವುದಕ್ಕೂ, ನಿನ್ನ ಸೇವಾಮೃತವನ್ನು ಪಾನಮಾಡುವುದಕ್ಕೂ ಈ "ಭಕ್ತಮನೋರಂಜನಿ" ಯು ಹೊರಟಿರುವುದು.

ಓ ಪರಮೇಶ್ವರಾ! ದೀನಬಂಧು!! ದಯಾಸಿಂಧು!!! ಸಮಸ್ತಮಾನವಹೃದಯಗಳಲ್ಲಿ ಭಕ್ತಿದೀಪವು ಬೆಳಗುವಂತೆ ಅನುಗ್ರಹಿಸು.

ಪರಮಪಿತಾ! ಪರಮಮಾತಾ!! ನನ್ನ ಹೃದಯಪೂರ್ವಕವಾದ ವಂದನೆಗಳನ್ನು ಸ್ವೀಕರಿಸಿ ಆಶೀರ್ವದಿಸು.

ದೇ. ಶಾ. ಯ. ಶೇಷಗಿರಿರಾವು.

## ಭಕ್ತಿ ಕುಸುಮಾಂಜಲಿ

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ವಿಶ್ವೇಶರಪಹಕಿರಿದಾದದೀಪವಾಗಿ
ನಾನದೆಲ್ಲಿದ್ದರಲ್ಲೆಲ್ಲ ನಿಲಿಸುದವ
ವಿಮಲತರಕಾಂತಿಯಿಂದಲಿ ಬೆಳಗುತಿರಲಿ.

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ಸಹಜವಾಗಿಯು ನಿಜಪ್ರಕಾಶವನುತಾಳಿ
ಮುದವನೊದವಿಪ ಕಿರಿದಾದ ಪುಷ್ಪವಾಗಿ
ಅಲ್ಪವಹ ತನ್ನ ನೆಲೆಯೊಳು ಬೆಳಗುತಿರಲಿ.

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ದೈನ್ಯವನುನೀಗಿಪರರಿಗೆಧೈರ್ಯವಿತ್ತು
ಪಾಡುವವನನುಸಂತೋಷಪಡಿಸುವಂಥ
ಕಿರಿದೆನಿಪಗೀತರತ್ನ ಮಾಗಿರಲಿಳೆಯೊಳು.

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ಶಕ್ತಿಯಿರುವಷ್ಟು ಪರರಿಗೆಸಾಹ್ಯವೆಸಗಿ
ಅಬಲರಿಗೆಮಹಿಯೊಳಾಧಾರವಾದಚಿಕ್ಕ
ಊರುಗೋಲಾಗಿಸತತವು ನೊಪ್ಪುತಿರಲಿ.

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ಅಚ್ಚರಿಯಗೊಳಿಸಿ ಮನಸಿಗಾನಂದವೆಸಗಿ
ತುಂಬಿತುಳುಕುವಭಕ್ತಿಯಿಂದಂದವಾದ
ಚಿಕ್ಕಕೀರ್ತನೆಯಾಗುತಜಗದೆ ಬಾಳಿರಲಿ.

ಗೀ = ದೇವನಿನ್ನ ಯದಯದೆನ್ನ ಜೀವಚರಿತೆ
ನವ್ಯಭವದೀಯಮಣಿಭೂಷಣದೊಳು ಮೆರೆದು
ಅಲ್ಲಿರುವಸರ್ವಭೂಷಣಕಂದಪಡುವ
ಕಿರಿಯಮುತ್ತಿನಸರವಾಗಿ ಮೆರೆಯುತಿರಲಿ.

Digitized by ROJA MUTHIAH RESEARCH LIBRARY

## ಅಂಕಿತವು.

ಕ॥ ಭಕ್ತರಕರುಣಾಭರಣಾ
ಮುಕ್ತಿಯನೆಸಗುವ ಮುನಿಜನಮುಕ್ತಾಭರಣಾ
ರಕ್ತಿಯೊಳೀಕೃತಿರತ್ನವ
ಭಕ್ತಿಯನಿಟ್ಟರ್ಪಿಸಿರುವೆನಿನ್ನಯಪದದೋಳ್॥

ಕ॥ ಭಕ್ತರವರಮಂದಾರಾ
ಭಕ್ತರಮನದಲ್ಲಿ ಮೆರೆವ ದೇವಾ ನಿನಗೀ
ಭಕ್ತಮನೋರಂಜನಿಯಂ
ಭಕ್ತಿಯನಿಟ್ಟರ್ಪಿಸಿರುವೆ ಕಾಣ್ಕೆಯನೀಗಳ್॥

ಕ॥ ವಂದನೆಯುನಿನಗೆ ದೇವಾ
ವಂದನೆನಿನ್ನಯ ಪದಂಗಳಿಗೆ ವರಭಾವಾ.
ಅಂದದಿ ನಾನನುಭವಿಸುವ
ಕುಂದದಭಾಗ್ಯಂಗಳೆಲ್ಲನಿನ್ನ ವೆಡೇವಾ॥

ದೇಶಾಯಿ ಶೇಷಗಿರಿರಾವು.

ಶ್ರೀ.

# ಭಕ್ತಮನೋರಂಜನಿ.

ಮಧ್ಯಮಾವತಿ- ಚಾಪು

ಎಷ್ಟರವನು ನಿನ್ನ ಕೀರ್ತಿಸಲು

ಈಶ್ವರ ನಾ

ನೆಷ್ಟರವನು ನಿನ್ನ ಕೀರ್ತಿಸಲು ॥ಪ॥

ಕಷ್ಟಪಟ್ಟುಸ್ವಲ್ಪವಾದರು. ಗಾನಶಾಸ್ತ್ರವಕಲಿಯಲಿಲ್ಲವು ॥ಎಷ್ಟ॥ ಅ. ಪ.

೧. ಪರಿಯಪರಿಯಲಿನಿನ್ನ ಹಾಡಲು- ಪರಮಕೌತುಕವಿರುವ್ರದೆನಗೆ
ಪರಮಪುರುಷನೆಯೆಂತುಸಫಲವ- ಪಡೆಯುವೆನೊನಾನರಿಯೆನರಿಯೆನು॥ಎಷ್ಟ॥

೨. ಚಾರುಸಂಗೀತಪ್ರವೀಣರು- ನಾರದಾದಿಮಹಾಮುನೀಂದ್ರರು
ಸಾರಿಹಾಡುತ್ತಿರಲುಮೋದವ- ಮೀರಿಶಾಲಿಪದೇವನೀನು ॥ಎಷ್ಟ॥

೩. ರಾಗತಾಳಗಳೆಲ್ಲ ಕಲಿತು- ರಕ್ತಿಯಿಂದಲಿಹಾಡಿನಿನ್ನನು
ರಾಗಪಡೆದತ್ಯಾಗರಾಜನು- ಅಲ್ಲನಾನುದೀನನು ॥ಎಷ್ಟ॥

೪. ಭಕ್ತಿಯಿಂದಲಿನಿನ್ನ ಗುಣಗಳ- ಭವ್ಯರೀತಿಯಿಂದಪಾಡಲು
ಶಕ್ತಿಯಿಲ್ಲದದೀನನಾನು- ಸ್ವಾಮಿನಿನ್ನ ನೆನಂಬಿಯಿರುವೆನು ॥ಎಷ್ಟ॥

೫. ಹೆಚ್ಚು ಹೊಗಳಿನಿನ್ನ ಹಾಡಲು- ಹೆಚ್ಚು ಮಂದಿಮಹಾತ್ಮರಿರಲು
ಮೆಚ್ಚುವೆಯೊಈಶ್ವರನೆನನ್ನ- ಮೆಚ್ಚಲಾಗದಗೀತಜಾತವ ॥ಎಷ್ಟ॥

Digitized by ROJA MUTHIAH RESEARCH LIBRARY

## ೨. ಕಮಾಚ್-ಚಾಪು.

ಕೊಂಡಾಡಲಳವೆನಿನ್ನ ಕುವಲಯವಿನುತ ||ಪ||

೧. ದಿನಕರಶಶಿತಾರಾ-ಗಣಗಳಬೆಳಗಿಸಿ
ಘನತೇಜವನುತೋರ್ಪ-ಕಾಂತಿವಂತನುನೀನು ||ಕೊಂ||

೨. ಬುಗುರಿಯುಪರಿಯಲಿ-ಭೂಮ್ಯಾದಿಗ್ರಹಗಳ
ಗಗನದಿತಿರುಗಿಪ-ಕಡುಚದುರನುನೀನು ||ಕೊಂ||

೩. ಮಂಡಲಂಗಳನೆಲ್ಲ-ಮಹಿಮೆಯಿಂರಚಿಸಿಯು
ದ್ದಂಡರೀತಿಯಿಂನಡಿಪ-ಚಂಡಶಾಸನನೀನು ||ಕೊಂ||

೪. ಸ್ತುತ್ಯವಾಗಿಹಸೃಷ್ಟಿ-ಸೌಂದರ್ಯದಲಿಮಾಡಿ
ಅತ್ಯದ್ಭುತವತೋರ್ಪ-ಐಂದ್ರಜಾಲಿಕನೀನು ||ಕೊಂ||

೫. ಪಾಠಶಾಲೆಯಮಾಡಿ-ಪರಿಪರಿಭುವನವ
ಪಾಠವಕಲಿಯಿಪ-ಪರಮಗುರುವುನೀನು ||ಕೊಂ||

## ೩. ಕಲ್ಯಾಣಿ-ಆದಿತಾಳ

ದಿನವದುಸುದಿನವು ಅಲ್ಲವೆ ||ಪ||
ಮನದೊಳುನಿನ್ನನು-ಮರೆಯದೆಪಾಡುವ ||ದಿನ||

೧. ಘನರಾದನಿನ್ನಭಕ್ತ-ಜನಗಳಕೂಡಿ
ಮುನಿನುತನಿನ್ನನು-ಮುದದಿಂಪಾಡುವ ||ದಿನ||

೨. ಕನಿಕರವೆದೆಯೊಳು-ಕರಗಿಪಾರುತಿರೆ
ದೀನರಕಷ್ಟವ-ತೀರಿಸುತಿರುವ ||ದಿನ||

೩. ಗುರುಧೈರ್ಯದಿನಿನ್ನ-ವರಶಾಸನದೊಳು
ಚರಿಪರಚರಿತೆಯ-ಹರುಷದಿಕೇಳುವ ||ದಿನ||

೪. ಕಲೆಗಳಕಲಿತುಸ-ತ್ಕಾರ್ಯವಮಾಡುತ
ಬೆಳಗುವಬುಧರನು-ಬಹುಮಾನಿಸುವ ||ದಿನ||



೫. ಬಂಧುಗಳೆಲ್ಲರ-ಬಹುಪ್ರೀತಿಯಿಂದಲಿ
ಅಂದದಿನೋಡುತ-ಆನಂದವಪೊಂದುವ ||ದಿನ||

—:0:—

## ೪. ಮೋಹನ-ಆದಿತಾಳ

ಎಲ್ಲಾನಿನ್ನದಯೆ-ಅಖಿಲೋದ್ಧಾರ-ಎಲ್ಲಾನಿನ್ನದಯೆ ||ಪ||

೧. ಚಿಂತೆಯುನಿನ್ನದಯೆ-ಚಿತ್ತವುನಿನ್ನದಯೆ
ಶಾಂತಿಯುನಿನ್ನದಯೆ-ಶಕ್ತಿಯುನಿನ್ನದಯೆ ||ಎಲ್ಲಾ||

೨. ಜನಕನುನಿನ್ನದಯೆ-ಜನನಿಯುನಿನ್ನದಯೆ
ಜನನಮರಣ-ಸಂಸಾರವುನಿನ್ನದಯೆ ||ಎಲ್ಲಾ||

೩. ಶತ್ರುವುನಿನ್ನದಯೆ-ಮಿತ್ರನುನಿನ್ನದಯೆ
ಪುತ್ರನುಪುತ್ರಿಕ-ಳತ್ರವುನಿನ್ನದಯೆ ||ಎಲ್ಲಾ||

೪. ಗಾಳಿಯುಭೂಮಿಯು-ಗಗನಜಲಾಗ್ನಿಯು
ಕಾಲವುದೇಶವು-ಕಷ್ಟವು ||ಎಲ್ಲಾ||

೫. ಭಾವವುನಿನ್ನದಯೆ-ಭಾಷೆಯುನಿನ್ನದಯೆ
ಪಾವನತರವಹ-ಪ್ರಾಣವುನಿನ್ನದಯೆ ||ಎಲ್ಲಾ||

## ೫. ಮಧ್ಯಮಾವತಿ—ಆದಿತಾಳ

ಪತಿತಪಾವನನುನೀನು-ಪತಿತರುನಾವು |
ಅತುಲಿತಕೃಪೆಯಿಂದ-ಸತತವುಪಾಲಿಸು ||ಪ||

೧. ತಾಯಿನೀನುತನಯರುನಾವು-ದಯೆಯತೋರುತನಮ್ಮನು |
ಪ್ರಿಯದಿಂದನಿಂನಂಕದೊಳಿಟ್ಟು-ಪಾಲಿಪುದೆಮ್ಮನು ||ಪ||

೨. ಗುರುವುನೀನುಶಿಷ್ಯರುನಾವು-ಕೋರಿದೆವುಜ್ಞಾನವು |
ಪರಮಜ್ಞಾನದೀಪತನುವೊಳು-ಬೆಳಗುವಂದದಿಮಾಡುವುದು ||ಪ||

೩. ಕೇವಲನಮ್ಮಸ್ವಾಮಿನೀನು-ಸೇವಕರುನಾವು |
ದೇವನಿನಗೆಇಷ್ಟವಾದ-ಸೇವೆಯನೀಯುವುದು ||ಪ||

Digitized by ROJA MUTHIAH RESEARCH LIBRARY

೪. ಅನುಪಮಸುಖದಾತನೀನು-ಯಾಚಕರುನಾವು |
ಕನಿಕರದಿಂದಭಿಕ್ಷವನೀಡು-ಕರವಚಾಚಿದೆವು ||ಪ||

೫. ಪ್ರಭುವುನೀನುಪ್ರಜೆಯುನಾವು-ಭಾಗ್ಯಸೌಭಾಗ್ಯವು |
ವಿಭವದಿಂದಶುಭಗಳನ್ನು-ಪ್ರಬಲವಾಗಿಸುರಿಸುವುದು ||ಪ||

---

೬. ಕಾಪಿ—ಚಾಪು

ಅವತೇಂಕೃತಾರ್ಥರು-ಅವನಿಯೊಳಗೆಸ್ವಾಮಿ|
ಭಾವದಿನಿನ್ನಸುಭಕ್ತಿಯಿಂ-ಪೊಗಳುವ ||ಅ||

೧. ದೂರಲುದಾರಣ-ದುಃಖವುಬಂದರು |
ಧೀರತೆನಿನ್ನಾಜ್ಞೆ-ತೀರಿಸಿಪೊಳೆಯುವ ||ಅ||

೨. ವಿಬುಧರಸೇರಿ-ವಿದ್ಯೆಯಪೊಂದಿ |
ಶುಭಗುಣವಂತರಾಗಿ-ಶೋಭಿಸುತಿರುವ ||ಅ||

೩. ಪ್ರಬಲಬಲಾಢ್ಯರಾಗಿ-ಭಕ್ತಿಯೊಳ್‌ನಮ್ರರಾಗಿ |
ಅಬಲರಿಗೆಲ್ಲರಿ-ಗಭಯವನೀಯುವ ||ಅ||

೪. ಎಲ್ಲಿಯುನೀನೆಂದು-ಎಲ್ಲವುನೀನೆಂದು |
ಎಲ್ಲವನಿನಗಾಗಿ-ಸಲ್ಲಿಸುತಿರುವ ||ಅ||

---

೭. ಬೇಹಗ್—ಆದಿತಾಳ

ಭಜಿಸೈ ಈಶ್ವರನ-ಭವಾಬ್ಧಿದಾಂಟಲುಬಯಸುವೆಯಾದರೆ ||ಪ||

೧. ನಿಜಾನುಚರರನು-ನಿರಂತರದೊಳು |
ತ್ಯಜಿಸದೆಸಲಹುವ-ದಯಾಸ್ವರೂಪನ ||ಭ||

೨. ಚರಾಚರಂಗಳ-ಜಗದ್ಗಣಂಗಳ |
ಧರಿಸುತಲಿರುವ-ಪ್ರಭೋತ್ತಮೋತ್ತಮನ ||ಭ||

೩. ಮುನೀಂದ್ರನಿರ್ಮಲ-ಮನೋಂಬರದೊಳು |
ಘನದಿಂಬೆಳಗುವ-ದಿನೇಂದ್ರಮೂರ್ತಿಯ ||ಭ||



೪. ಅನಂತಸುಖಗಳ-ನನಂತಜೀವರಿ |
ಗನುಗ್ರಹಿಸುವ-ಅನಂತಮಹಿಮನ ||ಭ||

೮. ಮಧ್ಯಮಾವತಿ-ಆದಿ,

ಮತ್ತೆಬಾರದೀ-ಮಾನುಷಜನ್ಮವು ||ಪ||
ಉತ್ತಮವಿದುಹರಿ-ಯಿತ್ತಪ್ರಸಾದವು ||ಮ|| ಅ. ಪ||

೧. ಪರಮಪುರುಷನ-ಪರಮಾದ್ಭುತಗಳ |
ದರುಶನಮಾಡುವ-ದಿವ್ಯಯಂತ್ರವಿದು ||ಮ||

೨. ಪರಿಪರಿವಿಧದಲಿ-ಪರರಿಗೆಹಿತವನು |
ಅರಿತುಮಾಡುವ-ಪರಮಸಾಧನವಿದು ||ಮ||

೩. ಘನಸದ್ಗುಣಮಣಿ-ಗಣವಗಳಿಸಲು |
ಅನುವಾಗಿಲಭಿಸಿದ-ಅನುಪಮಧನವಿದು ||ಮ||

೪. ದೇವನಸೇರಿಸೆ-ಜೀವನಕೊಂಡೊಯ್ವ |
ದೇವದತ್ತವಾದ-ದಿವ್ಯರಥವಿದು ||ಮ||

೫. ಕೆಟ್ಟಕೆಲಸದಿದ-ನಿಟ್ಟಮಾನವನ |
ಹುಟ್ಟದುವ್ಯರ್ಥವು-ಹುಟ್ಟದುವ್ಯರ್ಥವು ||ಮ||

೯. ಬೇಹಾಗ್-ಆದಿತಾಳ

ದರುಶನನೀಡೈ-ಧನ್ಯರಮಾಡೈ ||ಪ||
ಪರಮದಯಾಕರಾ-ಪಾಪಸಂಹಾರಾ ||ದರು|| ಅ. ಪ||

೧. ಎಮ್ಮೊಳುಕೃಪೆತೋರು-ಎಮ್ಮಮೊರೆಕೇಳು |
ಸುಮನೋಮನೋಹರಾ-ಶುದ್ಧವಿಚಾರಾ ||ದ||

೨. ಕೋರಿಕೆಗಳನೆಲ್ಲ-ಕರುಣದಿನೀಡುತ |
ಪೊರೆವುದುನಮ್ಮನು-ಪರಮೋದಾರಾ ||ದ||

೩. ಚಿಂತೆಯತೀರಿಸು-ಚಿತ್ತಾಬ್ಜಭಾಸ್ಕರಾ |
ಸಂತಾಪವಾರಿಸು-ಶಾಂತಿಸುಧಾಕರಾ ||ದ||

Digitized by ROJA MUTHIAH RESEARCH LIBRARY

## ೧೦. ನೋಟು (ಹಿಂದೂಸ್ತಾನಿ ಭೈರವಿ-ರೂಪಕ)

ವಿಶ್ವನಾಥನಧ್ಯಾನವು-ವಿಮಲಮುಕ್ತಿಸೋಪಾನವು ||ಪ||
ಶಾಶ್ವತಸುಖಸಂಧಾನವು-ಸಕಲಾಘಪಿಧಾನವು ||ವಿಶ್ವ|| ಅ. ಪ||

೧. ಕಾಮಕ್ರೋಧಲೋಭಗಳ್-ಕಠಿನಶತ್ರುಜಾಲಗಳ್ |
ನೇಮದಿಂದನಡಿಸುವಲ್ಲಿ-ನಿಜದಿಪೋಪುವುದುರಿತಗಳ್ ||ವಿಶ್ವ||

೨. ಚಿತ್ತದೊಳಸೂಯೆಪುಟ್ಟೆ-ಕಿಚ್ಚಿನಂತೆವುರಿಯದಿರ |
ಉತ್ತಮಶಾಂತಿಸ್ವಭಾವ-ವೊಂದಿಯಿಹುದುನಿರತವು ||ವಿಶ್ವ||

೩. ಮಿತ್ರದೃಷ್ಟಿಯಿಂದಪ್ರಾಣಿ-ಮಾತ್ರವನ್ನುವೀಕ್ಷಿಸು |
ಪಾತ್ರವರ್ತನೆವೊಂದಿಜೀವನ-ಯಾತ್ರೆಮಾಡಲಾರಂಭಿಸು ||ವಿಶ್ವ||

೪. ಜಗವನದ್ಭುತವಾಗಿರಚಿಸಿ-ಪೊರೆವಪ್ರಭುವಿಗಿಂತಲು |
ಜಗದೊಳಧಿಕನಾವನಿಲ್ಲವು-ಶರಣುಹೊಂದುವಾತನ ||ವಿಶ್ವ||

## ೧೧. ಕಮಾಚ್-ಚಾಪು

ಎಷ್ಟೋತಕ್ಕವನಾನಲ್ಲವೆ-ಈಶ್ವರಶಿಕ್ಷೆ |
ಗೆಷ್ಟೋತಕ್ಕವನಲ್ಲವೆ ||ಎ|| ಪ||

೧. ಇನಿತಾದರುಪುಣ್ಯ-ನಾಮಾಡಲಿಲ್ಲವು |
ಅನವರತವುನಾ-ನಪಕೃತ್ಯಗೈದೆನು ||ಎ||

೨. ಅಂತವೆಯಿಲ್ಲವು-ಯೆನ್ನಪರಾಧಕೆ |
ಎಂತುದಂಡಿಸಿದರು-ಈಶ್ವರನಿನ್ನದೂರೆ ||ನೆಷ್ಟೋ||

೩. ಮಂದಿಯೆಲ್ಲವನಾ-ನಿಂದಿಸಿದವಹೀನ |
ಹೊಂದುವೆಸುಖವೆಂದು-ಬಲುಸ್ವಾರ್ಥಪರನಾದೆ ||ನೆಷ್ಟೋ||

೪. ಮೋಕ್ಷಕೆಶಿಕ್ಷೆಯು-ಮೊದಲಿನಅಂತಸ್ತು |
ಶಿಕ್ಷೆಯೆತಕ್ಕದುವು-ಚಿತ್ತಶುದ್ಧಿಗೆದೇವ ||ಎ||



## ೧೨. ಕಾಪಿ-ಚಾಪು

ತಾನುಸವೇಕೆಸ್ವಾಮಿ-ತನಯನಪೊರೆಸ್ವಾಮಿ ||ಪ||
ಕಾಮಿತನೀಡುಸ್ವಾಮಿ-ಕನಿಕರತೋರುಸ್ವಾಮಿ ||ತಾ|| ಅ. ಪ||

೧. ಬೇಡಿಕೊಂಡರುದಯೆ-ಬಾರದೆನಿನಗೆ |
ಪೊಡವಿಪನನ್ನಪ-ರಾಧವುಯೇನು ||ತಾ||

೨. ಎಲ್ಲರನಾದರಿಪ-ಅತಿಕೃಪಾಮತಿಯೆಂದು |
ಎಲ್ಲರುಪೇಳ್ವುದು-ಅನೃತವೆಯೇನು ||ತಾ||

೩. ಇಳೆಯೊಳುಯೆಲ್ಲರ-ಪಾಲಿಸಿದವನೀನು |
ಎಲ್ಲರಿಗಿಂತಲು-ಅಧಮನೆನಾನು ||ತಾ||

೪. ದಿಕ್ಕುನೀನೇಯೆಂದೆ-ದೀನನುನಾನೆಂದೆ |
ಅಕ್ಕಟನನ್ನಬಿಡ-ಲಾಗದುಯೆಂದೆ ||ತಾ||

## ೧೩. ಶಂಕರಾಭರಣ-ನೋಟ್-ಏಕತಾಳ

ಆರ್ಯರಾಗಿವೇದಮಾರ್ಗ-ದಲ್ಲಿನಡೆಯುತ |
ಧೈರ್ಯದಿಂದಾರ್ಯಧರ್ಮವ-ಬಿಡದೆಪಾಲಿಸಿ ||ಪ||

೧. ಅವಿದ್ಯೆತೊರೆದುಸರ್ವದಾ-ವಿದ್ಯೆಯನ್ನುಕಲಿಯುತ |
ವಿವಿಧವಿದ್ಯೆಯಲ್ಲಿಜಯವಪಡೆದುವರ್ತಿಸಿ ||ಆರ್ಯ||

೨. ವೇದಾನುಕೂಲ-ವಾದನಡತೆಯಲ್ಲಿನಿಲ್ಲುತ |
ಮೋದದಿಂದನಿಮ್ಮಮನವ-ಈಶನಲ್ಲಿನಿಲ್ಲಿಸಿ ||ಆರ್ಯ||

೩. ಪರಮಯೋಗಿವರ್ಯರಲ್ಲಿಸೇರಿಸುಖಿಸುತ |
ಪಡೆದುಮುಕ್ತಿಮಾರ್ಗವನ್ನುಬಿಡದೆಸಾಧಿಸಿ ||ಆರ್ಯ||

೪. ಪರರಹಿತವಮರೆಯದಂತೆನಿರತವೆಣಿಸುತ |
ಪರರಹಿತವಮಾಡಿಕೀರ್ತಿಪಡೆದುಜೀವಿಸಿ ||ಆರ್ಯ||

Digitized by ROJA MUTHIAH RESEARCH LIBRARY

೫. ನೀತಿನ್ಯಾಯದಿಂದತುಂಬಿಪ್ರೀತಿತೋರುತ |
ಶಾಂತಿಸತ್ಯಧರ್ಮಬಿರುದು ಪಡೆಯೆಯತ್ನಿಸಿ ||ಆರ್ಯ||

೬. ಕಮಲದಂತೆಬೆಳಗುತಿರ್ಪಕಣ್ಣುತೆರೆಯುತ |
ವಿಮಲಪ್ರೇಮಪೂರ್ಣಸೃಷ್ಟಿಯನ್ನುವೀಕ್ಷಿಸಿ ||ಆರ್ಯ||

೭. ಸ್ಪಷ್ಟವಾಗಿಮಹಿಮೆಗೊಳಿಪಸೃಷ್ಟಿನೋಡುತ |
ಶ್ರೇಷ್ಠವಾದಭಕ್ತಿಯಿಂದ ಸೃಷ್ಟಿಕರ್ತನಧ್ಯಾನಿಸಿ ||ಆರ್ಯ||

೮. ತಾಪರಹಿತಶಾಂತಿಯಿಂದನಿರತಮೆರೆಯುತ |
ಪಾಪಗಳಿಗೆಸಿಕ್ಕದಂತೆಪಾಪಹರನಸೇವಿಸಿ ||ಆರ್ಯ||

೯. ವೈರವನ್ನುಹೃದಯದಿಂದದೂರಗೊಳಿಸುತ |
ಪರಮಪ್ರೇಮವನ್ನು ಹೃದಯದಲ್ಲಿತುಂಬಿಸಿ ||ಆರ್ಯ||

೧೦. ಅಮಲಬುದ್ಧಿಯಿಂದಜ್ಞಾನನೇತ್ರತೆರೆಯುತ
ವಿಮಲಕಾಂತಿಕಾಂತನನ್ನುಮನದಿವೀಕ್ಷಿಸಿ ||ಆರ್ಯ||

೧೧. ಕೆಡಕುಮಾಳ್ಪಮನವತೊರೆದುನೋಲ್ಮೆಬಯಸುತ
ಜಡದೆಬೆಳ್ಳೆಭಾವವನ್ನು ಮನದಿನಿಲ್ಲಿಸಿ ||ಆರ್ಯ||

೧೨. ಈಶನವನೆಗತಿಯೆನುತ್ತ ನಿಜದಿನಂಬುತ
ಲೇಶವಾದರುಭೀತಿಯಿಲ್ಲದೆ ಜಗದಿವಾಸಿಸಿ ||ಆರ್ಯ||

೧೩. ನಿಗಮವಿಹಿತಮಾರ್ಗದಲ್ಲಿನಿರತಚರಿಸುತ
ಜಗದಿಜನರುಕೆಡಕುಮಾಡರೆಂದುವೀಕ್ಷಿಸಿ ||ಆರ್ಯ||

೧೪. ದುಷ್ಟನರರಿಗೆಲ್ಲತಕ್ಕಶಿಕ್ಷೆನೀಡುತ
ಶಿಷ್ಟರನ್ನುಕಾಯ್ವನೆಂದುಸತತಭಾವಿಸಿ, ||ಆರ್ಯ||

೧೫. ವಿಶ್ವರಕ್ಷಕನೆಂಬಬಿರುದಿನಿಂದಮೆರೆಯುವ |
ವಿಶ್ವನಾಥಗೆವಂದನೆಮಾಡಿ ಧನ್ಯರಾಗಿರಿ ||ಆರ್ಯ||



೧೪ ನವರೋಜು—ಚಾಪು

ಪೂರ್ಣಚಂದ್ರನುನೀನುಪ್ರಭುವರ-ಪುಣ್ಯರೂಪಶುಭಂಕರಾ
ಪೂರ್ಣಚಂದ್ರಿಕೆನವಿಯುತಿರ್ಪ-ಪಕ್ಷಿನಾನುಪರಾತ್ಪರಾ ||ಪಲ್ಲ||

೧. ಕಮಲಪುಷ್ಪವುನೀನುದೇವ-ಕಡಗಿಮಧುವನುಪೀರುವ
ಭ್ರಮರನಾನುತ್ರಿಲೋಕಸುಂದರ-ಭವ್ಯವಿಭವಧುರಂಧರಾ ||ಪೂ||

೨. ನೀನುಪರಮಾನಂದಪೂರಿತ-ನೀರದವುಸಂಪತ್ಕರಾ
ನಾನುಮೋಪವಮೊರಿಯಾಡುವ-ನವಿಲುಮುನಿವರಗೋಚರಾ ||ಪೂ||

೩. ನಿರುಪಮಪ್ರಜ್ಞಾನಜ್ಯೋತಿಯು-ನೀನುಭಕ್ತವಶಂಕರಾ
ಭರದಿನಿನ್ನಯನೀಲೆಬೀಳ್ವ-ಪತಂಗನಾನುಮನೋಹರಾ ||ಪೂ||

೪. ಕಾಂತಲೋಹವಚುಂಬಿಸುವುದಲೆ ಕಾಂತಕರುಣಾಸಾಗರಾ
ಅಂತುನಿನ್ನೊಳುನನ್ನಸೇರಿಸು ಸ್ವಾಂತಜಲರುಹಭಾಸ್ಕರಾ ||ಪೂ||

೫. ನೀರತೊರೆದಾಮೀನಿನಂದದಿ ನಿನ್ನತೊರೆದುತಪಿಸಿದೆ
ಧೀರನನ್ನಯತಪ್ಪುಮನ್ನಿಸು ದಿವ್ಯತರಸುಗುಣಾಕರಾ ||ಪೂ||

೬. ಚಾತಕದವೊಲುಕಾಣುಯಿರುವೆನು ಸ್ವಾಮಿನಾಹನಿಯೊಂದಕೆ
ಪ್ರೀತಿವರ್ಷವಸುರಿಸುನನ್ನೊಳು ಪ್ರಿಯತಮಾಮೃತಜಲಧರಾ ||ಪೂ||

೧೫ ಪಂತುವರಾಳಿ—ಚಾಪು

ಪ್ರಾತಃಕಾಲವಾಯ್ತುಭಕ್ತರೆಯೇಳಿರಿ ಪಾಣಿಯಜೋಡಿಸುವ |
ಶ್ರೀನಾಥನನೆನೆದುಪಾಣಿಯಜೋಡಿಸುವ ||ಪ||

೧. ರಾತ್ರಿಯೋಳ್ಹಾನಿಯುಬಾರದೆರಕ್ಷಿಸಿ ಪ್ರೀತಿತೋರಿದನಲ್ಲವೆ
ಪೂತಚಾರಿತ್ರನು ಪ್ರೀತಿತೋರಿದನಲ್ಲವೆ ||ಪ್ರಾತಃ||

೨. ಕಡುಕಷ್ಟವೊಂದಿದನಮ್ಮಡಲಿಗೆಬಲವನು
ಕಡುದಯದಿಂದಿತ್ತನು-ಕರುಣಾನಿಧಿ-ಕಡುದಯದಿಂದಿತ್ತನು ||ಪ್ರಾ.||

Digitized by ROJA MUTHIAH RESEARCH LIBRARY

೩. ಮೆಲ್ಲಮೆಲ್ಲನೆಮಂದಮರುತನಕಳುಹಿದೆ
ಎಲ್ಲರನೆಬ್ಬಿಸಲು-ಆನಂದಜಲಧಿ ಎಲ್ಲರನೆಬ್ಬಿಸಲು ‖ಪ್ರಾತಃ‖

೪. ಇಂಪಾಗಿಕೂಗುತಯೆಚ್ಚರಗೊಳಿಸಲು
ಗುಂಪಾಗಿಕಳುಹಿದಪಕ್ಷಿಗಳಕೃಪಾನಿಧಿಯುಗುಂಪಾಗಿಕಳುಹಿದಪಕ್ಷಿಗಳ

೫. ಗಾಢಾಂಧಕಾರದಿಮುಳುಗಿದಭುವಿಯನ್ನು
ಕಡುಬೇಗಬೆಳಗಿಸಿದ ಕಮನೀಯಕೀರ್ತಿ ಕಡುಬೇಗಬೆಳಗಿಸಿದ ‖ಪ್ರಾ‖

೬. ಚೇತನಾತ್ಮಕವಾಗಿಚಲಿಪಂತೆಆದುವು
ಭೂತಜಾಲಗಳೆಲ್ಲವು-ಭುವನೇಶದಯದಿಂ ಭೂತಜಾಲಗಳೆಲ್ಲವು ‖ಪ್ರಾ‖

೭. ಆಲಸ್ಯಮಾಡದಿನ್ನು ಆಪ್ತರೆಯೇಳಿರಿ
ಆಲಿಸಿಸೇವಿಸುವ ಆಪ್ರಭುವಾಜ್ಞೆ ಯಾಲಿಸಿಸೇವಿಸುವ ‖ಪ್ರಾತಃ‖

೧೬ ಕಳಾವತಿ ಆದಿತಾಳ

ನನ್ನಪಡೆದಪಿತನೆ-ನೀನಗಲಬೇಡ ‖ಪ‖
ನಿನ್ನಬಿಟ್ಟುಗತಿಯು ನಾನನ್ಯರಕಾಣೆ ‖ನನ್ನ‖ ಅ. ಪ.

೧. ಎಷ್ಟುಕಷ್ಟಬರಲು ಸೃಷ್ಟಿಕರ್ತನಿನ್ನ
ನಿಷ್ಠೆಯಿಂದನನಗೆ ನೆನೆವಶಕ್ತಿನೀಡು ‖ನನ್ನ‖

೨. ಕೋಪವಿಲ್ಲದಂಥ ಪ್ರಭುವುನೀನೆಯೆಂದು
ತಾಪಸರುನುಡಿಯೆ ತಿಳಿಯುತಿದ್ದೆನಾನು ‖ನನ್ನ‖

೩. ಪಾಪಜಾಲಗಳು ಪಿಡಿದುಯೆಳೆಯುವಾಗ
ಆಪ್ತನಾಗಿನನ್ನ ಆದರಿಸುನೀನು ‖ನನ್ನ‖

೪. ಸುಗುಣರಾಶಿನಿನ್ನ ಸುತನೆಂದುಮನದಿ
ಬಗೆದುದಾರಿತೋರು ಭಕ್ತವತ್ಸಲನೆ ‖ನನ್ನ‖



೧೭ ಕುರಂಜಿ—ಆದಿತಾಳ

ಸಂಜೆಯೆಪ್ಪೊಳ್ಳೆ ಸಮಯವಲ್ಲವೆ ‖ಪ‖
ಪ್ರಾಂಜಲಿಗೂಡಿಸಿ ಪ್ರಭುಪ್ರಾರ್ಥನೆಮಾಡಲು ‖ಸಂಜೆ‖

೧. ಮಂಜುಲವಾಣಿಯಿಂ ಮಾನಸಕಲ್ಮಷ
ಭಂಜನನಭಕ್ತನ ರಂಜನನಪೊಗಳಲು ‖ಸಂಜೆ‖

೨. ಶಾಂತಿಯಿಂರವಿಯಸ್ತ ಶೈಲಪೀಠವಸೇರಿ
ಸ್ವಾಂತಗಳಲ್ಲಿ ಶಾಂತಿಗೊಳಿಸುವ ‖ಸಂಜೆ‖

೩. ಪಂಕಜಾತಂಗಳು ಭಕ್ತಿಯಿಂತಲೆಬಾಗಿ
ಸಂಕಟಹರನಿಗೆ ಸಸದಿನಮಿಸುವ ‖ಸಂಜೆ‖

೪. ಚುಕ್ಕೆಗಳಾಕಾಶದಿ ಚಿತ್ರವತೋರುತ
ಅಕ್ಕರೆಯಿಂದೀಶನ ಅದ್ಭುತವಸಾರುವ ‖ಸಂಜೆ‖

೫. ದನಿಯುಬಿಟ್ಟುಪಕ್ಷಿಗಳ್ ಮೌನದಿಗೂಡೊಳು
ದಿನಕರಮೂರ್ತಿಯ ಧ್ಯಾನವಮಾಡುವ ‖ಸಂಜೆ‖

೬. ಕಾಮಕ್ರೋಧಾದಿಗಳ ಗರ್ವವಮುರಿದುನಮ್ಮ
ಸ್ವಾಮಿಯುಸೇವಿಸಲು ಸರ್ವರುಕೂಡುವ ‖ಸಂಜೆ‖

೧೮ ಮಧ್ಯಮಾವತಿ—ಚಾಪು

ಪ್ರಭುವುಯೆಂಬಬಿರುದುಪಡೆದ ಬ್ರಹ್ಮಾಂಡನಾಥನು ‖ಪ‖
ಶುಭವನೀಡಲುನಮ್ಮಹೃದಯದಿ ವಿಭವದಿಂದಬಂಡನೇರಿ ‖ಪ್ರಭು‖

೧. ಸುಗುಣಗಣಮಣಿತೋರಣಂಗಳ ಸೊಗಸಿನಿಂದಲುಕಟ್ಟಿರಿ
ಮಿಗಿಲುಪರಮೋತ್ಸಾಹಧ್ವಜವನು ಗಗನಮುಟ್ಟಲುನಿಲಿಸಿರಿ ‖ಪ್ರಭು‖

೨. ಭವ್ಯಕರದಲಿಪಿಡಿದೆವದಯೆಯಾನವ್ಯಛತ್ರಿಯಹಿಡಿಯಿರಿ
ದಿವ್ಯವಿಜ್ಞಾನಪ್ರದೀಪ್ತಿಯ ತೇಜಿಸಂದದಿಬೆಳಗಿರಿ ‖ಪ್ರಭು‖

Digitized by ROJA MUTHIAH RESEARCH LIBRARY

೩. ಶಾಂತಿಸತ್ಯಗಳೆಂಬಶ್ವೇತ ಚಾಮರಂಗಳಹಾಕಿರಿ
ಸ್ವಾಂತದಲ್ಲಿದುರ್ಗುಣಂಗಳು ಸೇರದಂತೆಮಾಡಿರಿ ||ಪ್ರಭು||
೪. ಸ್ತೋತ್ರವೆಂಬುವಪುಷ್ಪವರ್ಷವ ಸರಸದಿಂದಲಿಸುರಿಸಿರಿ
ಪ್ರೀತಿಭಕ್ತಿಯುಕಾಣ್ಕೆಯಾಗಿ ಪ್ರೇಮದಿಂದಲಿನೀಡಿರಿ ||ಪ್ರಭು||

೧೯ ಜೇಗಡ—ಆದಿತಾಳ

ಕಂಡುಕೊಂಡೆನು ಕಣ್ಣಿಗಾನಂದದಿ ||ಕಂ|| ||ಪ||
ಕನಿಕರದಾಮೇಲು ಗಣೆಯಾಗಿಹನಿನ್ನ ||ಕಂ|| ಅ. ಪ.
೧. ಜನನವಿತ್ತುಪ್ರೀತಿ ಸ್ತನ್ಯಪಾನವೆಸಗಿ
ದಣಿಯೆಸಲಹಿದಂಥಾ ಜನನಿಯಲ್ಲಿನಿನ್ನ ||ಕಂ||
೨. ಸಮುಭಯುಗಳಿಂದ ಸನ್ನಹಿತವೆಕೋರಿ
ಪಯೆಯುತೋರಿದಂಥ ತಂದೆಯಲ್ಲಿನಿನ್ನ ||ಕಂ||
೩. ಮರೆಯದಿರುವನಿನ್ನ ಮಹಿಮೆಯೆಷ್ಟೋಯೆನಗೆ
ಕರುಣೆಯಿಂದಪೇಳ್ದ ಗುರುವಿನಲ್ಲಿನಿನ್ನ ||ಕಂ||
೪. ಪಾಪವಿಲ್ಲವೆಂಬ ಮಾತನಮಗೆತೋರೆ
ಶ್ರೀಯುತನನಿತ್ತ ಶಿಶುಗಳಲ್ಲಿನಿನ್ನ ||ಕಂ||
೫. ಚಿಂತೆಯಿದ್ದವೇಳೆ ಸೇರಿಬಳಿಯೊಳಿದ್ದು
ಸಂತಸವನಿತ್ತ ಸನ್ಮಿತ್ರರಲ್ಲಿನಿನ್ನ ||ಕಂ||

೨೦ ನಾರಾಯಣಿ—ಚಾಪು

ಕರುಣಾಮೃತಪೂರವೇ-ಪರಂಧಾಮಾ ||ಪ||
ಶರಣುಹೊಂದಿದನರರಪಾಲಿಗೆ ಅರಿಯೆಸುಂದರಪಾರಿಜಾತವೆ
ಕರುಣಾಗುಣಸಮುದ್ರವೆ ಮುನಿಪರಂಗೆನಿನ ಪೊಗಳಲಳವೆ ||ಕ||



೧. ಸರ್ವೇಶ್ವರಶ್ರೀಕರ ಸರ್ವಾಧಾರಾ ಸರ್ವೇಶ್ವರಶ್ರೀಕರ
ಸರ್ವದುರ್ಗುಣಗಣಕೆಸಿಕ್ಕುತ ಗರ್ವದಿಂಕಣ್ಗಾಣದಿರುವ
ದುರ್ವಿನೀತರಹಿಡಿದುತಿದ್ದುವ ಸರ್ವಶಕ್ತನುನೀನೆದೇವಾ ||ಸ||
೨. ನ್ಯಾಯಪಾಲನಭೂಷಣ ಅನ್ಯಾಯಶೋಷಣ ನ್ಯಾಯಪಾಲನಭೂಷಣ
ನ್ಯಾಯದಿಂವರ್ತಿಸುವವರಿಗೆಯ ಮೇಯಸುಖಗಳನೀಡುತ
ನ್ಯಾಯವನುಪ್ರಕಟಿಸುವಸುಜನ ಧ್ಯೇಯನಿಪರುಪಮರಮಪಾವನ ||ನ್ಯಾ||
೩. ಸತ್ಯವ್ರತಾಧಾರಕ ಶಾಂತಿಪ್ರಸಾರಕ ಸತ್ಯವ್ರತಧಾರಕ
ನಿತ್ಯಸುಖಧರ್ಮಪ್ರಚಾರಕ ನಿರುಪಮಾನಂದೈಕಕಾರಕ
ಸತ್ಯದೀಕ್ಷಾಚರಣಪೂರಕ ಸಾಧುತಾಪತ್ರಯನಿವಾರಕ ||ಸ||

೨೧ ಮೋಹನ—ಆದಿತಾಳ

ನಿರುಪಮಾನಂದವು ನಿಜವಾಗಿಬರುವುದು ||ಪ||
ಪರಮಪುರುಷಸೇವೆ ಭಕ್ತಿಯಿಂಮಾಡಲು ||ನಿ|| ಅ. ಪ.
೧. ದುರಿತಗಳೆಲ್ಲವು ದೂರಕೆಪೋಪುವು
ಕರುಣಾದಿಸದ್ಗುಣ ಗಣವುಲಭಿಪುದು ||ನಿ||
೨. ನುಡಿಗಳೊಳ್ಮಧುವು ಬಿಡದೆಯೆಬರುವುದು
ನುಡಿಯಲಾಗದಬುದ್ಧಿ ಯುಡುಗದೆಬಳೆವುದು ||ನಿ||
೩. ವದನವುತೇಜೋ ವಂತವಾಗಿರುವುದು
ಉದಯಿಪುದಂಗದೊಳು ಸದಮಲಪುಲಕವು ||ನಿ||
೪. ಸುರಿವುದುನೋಟದಿ ಸುಧೆಯಾವೃಷ್ಟಿಯು
ಹರಿಯೆಲ್ಲೆಡೆಯೊಳು ಅಂದದಿಕಾಣ್ಬನು ||ನಿ||

Digitized by ROJA MUTHIAH RESEARCH LIBRARY

## ೨೨ ಸೋರಟ್—ಜೇಪಾಗ್ ಏಕತಾಳ

ಜಯಾಜಯಾಜಯಾಧಿನಾಥ ಭಯವಿನಾಶನೆ ||ಪ||
ಜಯಾಜಯಾದಯಾಸ್ವರೂಪದಿವ್ಯದೇವನೇ ||ಜಯಾ|| ಅ. ಪ.

೧. ಘೋರಪಾಪತಾಪನಾಶಆರ್ತರಕ್ಷನೇ
ಭೂರಿಶೋಕಮರಿತದೂರಧರ್ಮಪಾಲನೇ ||ಜಯಾ||
೨. ಭವತ್ಪದಧ್ಯಾನನಿರತಭಕ್ತಪಾಲನೇ
ಭವತ್ಸಮರನಿಪುಣಯೋಧಶಕ್ತಿದಾತನೇ ||ಜಯಾ||
೩. ಸರ್ವಭೂತಸರ್ವಸೌಖ್ಯಸತ್ಯಶೀಲನೇ
ಸರ್ವಲೋಕಪಿತಾಮಾತ ಮಂಗಳದೇವನೇ ||ಜಯಾ||
೪. ಅನಾಥನಾಥನೀತಿದಾತನಿರ್ಮಲಾತ್ಮನೇ
ಜ್ಞಾನಪ್ರೇಮಮುಕ್ತಿದಾತಧನ್ಯದೇವನೇ ||ಜಯಾ||
೫. ದುರ್ಮತಾಭಿಮಾನಪೀಡಿತದುಷ್ಟಶಿಕ್ಷನೇ
ದುರ್ಮದಾಂಧಕಾರಪೀಡಿತ ಗರ್ವಭಂಜನೇ ||ಜಯಾ||
೬. ತಿಮಿರಪೀಡಿತಮೂರ್ಛಿತ ಭರತದೇಶೋದ್ಧಾರನೇ
ವಿಮಲಆರ್ಯಧರ್ಮಸ್ಥಾಪನ ವಿಜಯಶೀಲನೇ ||ಜಯಾ||

## ೨೩ ಕನ್ನಡ—ಚಾಪು

ಆತನನೋಡಿರೆ ||ಪ||
ಅತುಲಿತಸುಖರೂಪನೆ ಅಂತರ್ಯಾಮಿಯ ||ಆ|| ಅ. ಪ.

೧. ಮಿತಿಯಿರದಶುಭಗಳ ನಿತತವುಸುರಿಸುವ
ಪತಿಯುಸರ್ವೋತ್ತಮನ ಭಕ್ತವತ್ಸಲನ ||ಆ||
೨. ಬಹುವಿಘ್ನಗಳಸೂಕ್ಷ್ಮ ಪರಮಾಣುಗಳಿಂದ
ಬಹುಸೊಗಪುತುಂಬಿ ಪ್ರಪಂಚವಮಾಡಿದ ||ಆ||

Digitized by ROJA MUTHIAH RESEARCH LIBRARY

8412



೩. ಜಗದೊಳಗೆಜಂತು ಜಾಲವೃಜೀವಿಸಲ್
ಬಗೆಬಗೆಯಾಹಾರ ಸೊಗಸಿನಿಂತುಂಬಿದ ||ಆ||
೪. ಜೀವಕೋಟಿಯುಂಡಜ್ಭೆ ಜರುಗಿಸಲೋಸುಗ
ಕೇವಲಾದ್ಭುತದೇಹ ಗೃಹಗಳನೆಸಗಿಹ ||ಆ||
೫. ನಿರ್ಮಲಧರ್ಮವ ನಿರತವುಸಲಹುವ
ಧರ್ಮಾತ್ಮರಿಗೆಲ್ಲ ಧೈರ್ಯವನೀಡುವ ||ಆ||

## ೨೪ ಸಿಂಧುಕಮಾಚ್—ಆದಿತಾಳ

ಅಪಾರಮಹಿಮನ ಅಂದದೊಳೆಲ್ಲರು
ಈಸುಖೋತ್ಸವದೊಳು ನೇಮದಿಭಜಿಸುವ ||ಅಪಾ|| ಪ.

೧. ಪ್ರೇಮದಿಂಭಕ್ತರ ಕಾಮಿತತೀರಿಪ
ಸ್ವಾಮಿಯುಓಂಕಾರ ನಾಮಸುಶೀಲನ ||ಅ||
೨. ಭಕ್ತಮಾನಸಪದ್ಮ ಭವ್ಯಪೀಠದೊಳು
ರಕ್ತಿಯಿಂಮೆರೆಯುವ ಮುಕ್ತಿಪ್ರದಾತನ ||ಅ||
೩. ಅನುರಾಗಸೂತ್ರದಿ ಅಣುಗಳನಾತ್ಮಗಳ್
ಅನುಪಮರೀತಿಮಾಳ್ಪ ಆನಂದಮಯನ ||ಅ||
೪. ಶುಭಗಳನೆಲ್ಲೆಡೆ ಸೊಗಸಾಗಿ ಸುರಿಯುತ
ವಿಭವವತೋರಿಪ ವಿಶ್ವವಿನೋದನ ||ಅ||

## ೨೫. ಆನಂದಭೈರವಿ—ಚಾಪು

ಎಲ್ಲಿ ನೋಡಲಹುದು ನಿನ್ನ ಇಲ್ಲಿ, ದಾರಿತೋರುವನನಗೆ
ಜಡಮತಿನಾನು ||ಪ||
ಓದಲು ಅರಿಯೆನು ಹಾಡಲು ಅರಿಯೆನು
ಕೂಡಿನಿನ್ನೊಡನಿರಲು ತೋರುತಲಿರುವೆನು ||ಎಲ್ಲಿ|| ಅ. ಪ.

೧. ಏನೆಂದು ಕರೆಯಲಿನಿನ್ನ ನಾನೆಲ್ಲೆಲ್ಲಿ ಹುಡುಕಲಿ ನಿನ್ನ
ನಾನರಿಯೆಧಾಮವ ನಾಮವನರಿಯೆನು
ಏನೆಂದು ಕರೆಯಲಿ ಎಲ್ಲೆಲ್ಲಿ ಹುಡುಕಲಿ ||ಎಲ್ಲಿ||
೨. ಎಲ್ಲರು ನಿನ್ನ ರಿತಿಹದು ನಾಯಾರಕೇಳಿದರೂ ಅರಿಯೆನೆನ್ನು ವರು
ಅಂದದಿ ನಿನ್ನ ಹೊಂದಿ ಕುಂದದಪೋದವ
ಹೊಂದುನೆನೆಂಬಾಶೆ ಯೊಂದಿಹುದೆನಗೆ ||ಎಲ್ಲಿ||
೩. ಒಮ್ಮೆ ನೀದರುಶನನೀಡು ಒಮ್ಮೆ ನೀ ಮಾತಾಡಿಪೋಗು
ಇನ್ನು ನಿನ್ನ ಕರೆಯೆನು ಇನ್ನೇನು ಕೇಳೆನು
ನನ್ನ ದೆಲ್ಲ ವರ್ಪಿಸಿ ಧನ್ಯನಾಗುವೆನು ||ಎಲ್ಲಿ||

---

### ೨೬. ಶಂಕರಾಭರಣ- ರೂಪಕ

ದೇವನಿನ್ನ ಮಹಿಮೆಯನ್ನು ತಿಳಿಯೆ ಶಕ್ಯವೆ ||ಪ.||
ಕೇವಲ ಕರುಣಾಪೂರವೆ ಕೀರ್ತಿಧಾಮವೆ ||ದೇವ|| ಅ. ಪ.
೧. ಪರಮಭಕ್ತಿಯಿಂದ ಸೇವಿಪ ಭಕ್ತವರರಿಗೆ
ದುರಿತಗಳನು ಹರಿಪಶಕ್ತಿಯು ನಿರತನೀಡುವೆ ||ದೇವ||
೨. ಪರರಹಿತವ ಬಯಸಿ ಪಾಟುಪಡುವ ಜನರಿಗೆ
ನಿರುಪಮಾನಂದಪದವ ನೀನು ನೀಡುವೆ ||ದೇವ||
೩. ನಿನ್ನ ನೋಡಲಿಚ್ಛೆ ಪಡುವ ನೀತಿಪರರಿಗೆ
ನಿನ್ನ ದರ್ಶನವೆಲ್ಲೆಡೆಯಿತ್ತು ನಿಜವತೋರುವೆ ||ದೇವ||
೪. ವಿವಿಧಜಗವಬೆಳಗುತಿಹ ವಿಚಿತ್ರತೋರಲು
ವಿವಿಧದೇಹಗಳನು ನೀಡುವ ವಿಶ್ವವಿಭವನೆ ||ದೇವ||
೫. ಮೊದಲು ಕಷ್ಟವಿಟ್ಟುಮನವ ಹದವಗೊಳಿಸುತ
ಸದಯ ಹೃದಯನಾಗಿ ತುದಿಗೆ ಮುದವತೋರುವೆ ||ದೇವ||

---



### ೨೭ ಬೇಹಾಗ್—ಆದಿತಾಳ

ನಿನ್ನ ನಾಮವೆಯೆಷ್ಟೋರುಚಿಯಲ ನಿಖಿಲಸಜ್ಜನಪರಿಪಾಲ ||ಪ||
ಮಾನಸದಿಸೊಂಪುಟುಂಬುವ ಮಹಿತವೀಣಾಶಬ್ದವಲಾ | ನಿನ್ನ||
೧. ಮಧುರವಾದನಿನ್ನ ನಾಮವೆ ಮೌನಿಗಳಿಗೆಜಪವೆಲೆದೇವ
ಅಧಮಾಧಮರನುದ್ಧರಿಸುವ ಅಂಚಿತಸಾಧನವುದೇವ ||ನಿನ್ನ||
೨. ಅಖಿಲಪಾಪಗಳನುನೀಗಿಪ ಅದ್ಭುತಸಿದ್ಧೌಷಧವುದೇವ
ಸುಖವನಾತ್ಮಬಲವನೀಡುವ ಸುರುಚಿರಾಮೃತರಸವುದೇವ ||ನಿನ್ನ||
೩. ಭವ್ಯಧರ್ಮರಂಗಸ್ಥಿತ ಭಕ್ತವೀರಕೋಟಿಗೆ
ಅವ್ಯಯೋತ್ಸಾಹವಗೊಳಿಪ ದಿವ್ಯಭೇರಿಶಬ್ದವುದೇವ ||ನಿನ್ನ||

---

### ೨೮ ತೋಡಿ—ಚಾಪು

ಏಕೆನಿರಾಶೆ? ಈಶ್ವರನಿರಲು ||ಏಕೆ|| ಪ.
ಭಕ್ತರಕ್ಷಕನಾಥ ಭಯಪಡದಿರುಮನವೆ ||ಏಕೆ|| ಅ. ಪ.
೧. ಲೀಲೆಯಿಂಜಗಗಳ ಸಾಳುತ್ತಿದ್ದರೂಆತ
ಆಳುತನಿನ್ನನು ಅಗಲದೆಯಿರುವನು ||ಏಕೆ||
೨. ಪತಿತಪಾವನಬಿರುದ ಪಡೆದಿರುವಾತನು
ಹಿತನುಯಾವನುಇಲ್ಲ ಕ್ಷಿತಿಯೊಳವನಿಗಿಂತ ||ಏಕೆ||
೩. ಸುಖದುಃಖಗಳಕಡೆ ಸುಮ್ಮನೆನೋಡುವೆ
ಸಖನನಾತನಸ್ಮರಿಸು ಸರ್ವಸುಖವಹುದು ||ಏಕೆ||
೪. ಎಲ್ಲಜಾತಿಗಳವರ ಎಲ್ಲಮತಗಳವರ
ಎಲ್ಲಸ್ಥಿತಿಗಳವರ ನಿಲ್ಲಿರಕ್ಷಿಸುವನು ||ಏಕೆ||

Digitized by ROJA MUTHIAH RESEARCH LIBRARY

## ೨೯ ಭೈರವಿ—ಆದಿತಾಳ

ಆಪದ್ಬಾಂಧವ ಅತುಲದಯಾರ್ಣವ ‖ಪ‖
ಆಪ್ತನುನೀನೆಂದು ಅಡಿಗೆರಗಿದೆದೇವ ‖ಆಪ‖ ಅ. ಪ.

೧. ಪಾಪಗಳೆಷ್ಟೆಷ್ಟೊ ಬಲುವಿಧಮಾಡಿದೆ
ಪಾಪಗಳೆಲ್ಲಿಬಿದ್ದು ತಲ್ಲಣಿಸಿದೆನು
ಕೋಪವತೊರೆದಿನ್ನು ಕರುಣದಿಪಾಲಿಸು
ಪಾಪಗಳನೀಗಿಪ ಪರಮಪಾವನರೂಪ ‖ಆಪ‖

೨. ಘೋರದುಷ್ಕೃತಗಳ ಕೋಟಿಯಮಾಡಿದೆ
ವೀರಭಕ್ತನುಯೆಂದು ವೇಷವತಾಳಿದೆ
ಕೋರಬಾರದಂಥ ಕೋರಿಕೆಕೋರಿದೆ
ತೋರುವೆಯೆಂತೊ ಈಶ್ವರನಿನ್ನ ದಯೆ ‖ಆಪ‖

೩. ಪಂಚಭೂತಗಳ ಪ್ರಾಣೇಂದ್ರಿಯಗಳ
ಸಂಚಿತಬಂಧುಗಳಾ ಹಾರಾದಿಯ
ವಂಚಕನಾದೆನಗೆ ವರವಾಗಿನೀಡುತ
ಮಿಂಚಿತೋರಿದೆಯೊ ಈಶ್ವರನಿನ್ನಕೃಪೆ ‖ಆಪ‖

೪. ಗಣಿಸದೆಕರುಣಿಸಿ ನೀಡಿದವರಗಳ
ನೆಣಿಸದೆಯಿನ್ನೂ ನೀಡಲಿಲ್ಲವೆಂದು
ನಿನ್ನನಿಂದಿಸಿದ ನೀಚಾತಿನೀಚನು
ನನ್ನಶಿಕ್ಷಿಪೆಯೊ ನಾಥರಕ್ಷಿಪೆಯೊ ‖ಆಪ‖



## ೩೦. ಕಾಂಭೋಜಿ- ರೂಪಕ

ಜಯದೇವ ಜಯದೇವ ಜಯತ್ರಿಭುವನಕರ್ತಾ
ಪ್ರಭುಜಯತ್ರಿ ಭುವನಕರ್ತಾ ‖ಪ‖
ಜಯಸರ್ವಾಶ್ರಯದಾತಾ ಭಯಸಂಕಟಹರ್ತಾ ‖ಜಯ‖ ಅ. ಪ‖

೧. ನಿನ್ನ ಮಹಿಮೆಯ ಕೊಂಡಾಡುವು ವಖಿಲಚರಾಚರತತಿಗಳ್
ಪ್ರಭುನಿಖಿಲ ಚರಾಚರತತಿಗಳ್
ನಿನ್ನೆ ಮುಂದೆ ತಲೆಬಾಗಿಸುವರು ನಿಖಿಲೋರ್ವೀಶರು ಪ್ರಜೆಗಳ್ ‖ಜಯ‖

೨. ವರ್ಣಿಸಲಳವೆನಿನ್ನನು ಪರಮ ದಯಾಕರಮೂರ್ತಿ
ಪ್ರಭುಪರಮ ದಯಾಕರಮೂರ್ತಿ
ಪೂರ್ಣದಿಮೆರೆವುದು ಭುವಿದಿವಿಯೋಳ್ ನಿನ್ನ ಶುಭಕೀರ್ತಿ ‖ಜಯ‖

೩. ಚೇತನಾಚೇತನವಾಗಿ ಚಿತ್ರದಿ ಮೆರೆಯುತಲಿರುವೆ
ಪ್ರಭುಚಿತ್ರದಿ ಮೆರೆಯುತಲಿರುವೆ
ಪ್ರೀತಿಯಿಂ ಬಹಿರಂತರದೋಳ್ ಸತತವುವೀಕ್ಷಿಸುವೆ ‖ಜಯ‖

೪. ನಿನ್ನಜ್ಞಾನವೆಲ್ಲೆಲ್ಲಿಯು ನಿಗನಿಗವೆಂದು ಬೆಳಗುತ್ತಿದೆ
ಪ್ರಭುನಿಗನಿಗವೆಂದು ಬೆಳಗುತ್ತಿದೆ
ಸುಜ್ಞಾನದ ಸ್ತ್ರೀಪುರುಷರು ಜೊತ್ಯದಿಕಾಣುವರು ‖ಜಯ‖

೫. ವರ್ಣಿಸಲುತರವೆ ನಿನ್ನ ಪರಮಾದ್ಭುತಶಕ್ತಿ
ಪ್ರಭುಪರಮಾದ್ಭುತ ಶಕ್ತಿ
ಚೂರ್ಣವಗೊಳಿಸುಗರ್ವವ ಸುರುಚಿರ ಶುಭಸೂಕ್ತಿ ‖ಜಯ‖

೬. ಅಕ್ಷಯಸೇವೋತ್ಸಾಹವ ನನುದಿನ ನೀಡೆಲೆದೇವಾ
ಪ್ರಭುಅನುದಿನ ನೀಡೆಲೆದೇವಾ
ಭಿಕ್ಷವ ಬೇಡಿದೆವು ನೀಡು ಪ್ರೇಮಾಸ್ಪದದೇವಾ ‖ಜಯ‖

Digitized by ROJA MUTHIAH RESEARCH LIBRARY

೩೧. ಸುರಟಿ- ಚಾಪು

ಮಂಗಳಂ ಮಂಗಳಂ ಓ ಪ್ರಭು ನಿನಗೆ ‖ಮಂಗಳಂ‖ ಪ. ‖

೧. ಶೃಂಗಾರ ವಹಸೃಷ್ಟಿ ಚಿತ್ರದಿವಿರಚಿಸಿ
ಮಂಗಳವೆಸಗುತ ಮಹಿಯೊಳಗೆಲ್ಲಾ
ತುಂಗಮಹಿಮೆಯಿಂ ತುಂಬಿಬೇಗುವದೇವಾ ‖ಮಂಗಳಂ‖

೨. ನಿನ್ನಾಜ್ಞೆ ಪಾಲಿಪ ನೀತಿವರ್ತನರಿಗೆ
ನಿನ್ನಾನಂದವನಿತ್ತು ಧನ್ಯರಮಾಡುತ
ನಿನ್ನ ನ್ಯಾಯವೆ ಸಾರುವ ನಾಥನೆನಿನಗೆ ‖ಮಂಗಳಂ‖

೩. ಸದಮಲವಹನಿನ್ನ ಸದ್ಗುಣಪುಂಜವ
ಮುದದಿಂದ ತೋರಲು ಮುಕ್ತಿಯ ನೀಡಲು, ಯೆಮ್ಮ
ಹೃದಯಾಬ್ಜದೊಳಗೆ ಉದಯಿಸುತಂದೆ ‖ಮಂಗಳಂ‖

---

ಪಾಪಗಳೆಲ್ಲ ಪೋಪವೊಲು ಭಾವದಿ ನಿರ್ಮಲಭಕ್ತಿಯೆಂಬಸ
ದ್ದೀಪವಪ್ರೀತಿಯಿಂ ಬೆಳಗಿ ದಿವ್ಯ ಕೃಪಾಮೃತ ವೃಷ್ಟಿಯಿಂದಮು
ತ್ತಾಪಗಳೆಲ್ಲವಂ ಹರಿಸಿ ಧನ್ಯನ ಮಾಡಲು ಬೇಡುತಿರ್ಪೆನೋ
ತಾಪಸವಂದ್ಯಧೀರಜನ ತಾವನ ತೋಷಣ ಭಕ್ತಪೋಷಣಾ ‖

---

ಸುರಪಥನೆಂಬ ಪಾತ್ರೆಯೊಳು ಶೋಭಿಸೆ ಜ್ಯೋತಿಗಳಾಗಿ ಚಂದ್ರಸೂ
ರ್ಯರು, ವರಮೌಕ್ತಿಕ ಪ್ರಸರದಂತೆಸೆಯುತ್ತಿರೆ ತಾರೆಗಳ್, ಮನೋ
ಹರ ಮಹತೆಂಬೆಲರ್ ಚಮರಮಾಗಿರೆ, ಗುಲ್ಮಲತಾಸುಮಾಳಿ ಭೋ
ರ್ಗರೆವಪಿನ್ನಾದ ಮಾಗಿರಲು ತೂರ್ಯನಿನಾದವು, ದೇವದೇವತಾಂ
ಮೆರೆವುದು ಮಂಗಳಾರತಿ ಸ್ವಯಂ ಕೃತಮಾಗಿರೆ ಲೋಕನಾಯಕಾ ‖

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| | |

ಪುಸ್ತಕಸೂಚಿ

ವ. ಸಂ: O, 33, 1x DES B N23

ಕ್ರ. ಸಂ: 1754.

ಲೇಖಕ: ನಂದ (ದೇಶಾಂಬ)

ವ. ಸಂ: O, 33, 1x DES B N23

ಕ್ರ. ಸಂ: 1754.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTH